**MS – 046**

## Second Semester B.Com. Examination, May/June 2013
## (Prior to 2010-11) (Repeater)
### ಕನ್ನಡ ಭಾಷೆ – II
### ಸಾಹಿತ್ಯ ಸಂವಾದ – ೧

Time : 3 Hours Max. Marks : 90

I. 1) **ಅರ್ಥ** ಬರೆಯಿರಿ. **(4×1=4)**

ಖತಿ, ತಾಳಗೆ, ತಲೆಯೋಡು, ಖಣ.

2) **ನಾನಾರ್ಥ**ಗಳನ್ನು ಬರೆಯಿರಿ. **(4×1=4)**

ಮಣಿ, ಕಲಿ, ಕಾಡು, ಬೇಡ.

3) **ಮೂಲ** ರೂಪಗಳನ್ನು ಬರೆಯಿರಿ. **(4×1=4)**

ಅಹುದು, ಮೋರೆ, ಜವ, ಇಸ್ಕೂಲು.

4) **ಸಮಾನಾರ್ಥಕ** ಪದಗಳನ್ನು ಬರೆಯಿರಿ. **(4×1=4)**

ಭೂಮಿ, ಶಶಿ, ಕಾಲ, ಕದನ.

5) **ನಾಲ್ಕು** ಅನುಕರಣ ಪದಗಳನ್ನು ಬರೆಯಿರಿ. **(4×1=4)**

6) ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ. **(4×1=4)**

ತಲೆಬಾಗು, ರಕ್ತಚೆಲ್ಲು, ಹಸ್ತಶುದ್ಧಿ, ಕಣ್ಣುಕುಕ್ಕು.

7) ಈ **ಗಾದೆ** ಮಾತುಗಳನ್ನು ವಿವರಿಸಿ. **(2×3=6)**

i) ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

ii) ಒಗ್ಗಟ್ಟಿನಲ್ಲಿ ಬಲವಿದೆ.

II. ತಾರ್ಕಿಕ ಆಲೋಚನೆಯನ್ನು ಆಧರಿಸಿ **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **(4×5=20)**

1) 'ಲೋಕ ಪ್ರಸಿದ್ಧಿಯ ಜಯವೆಂಬರು' ಈ ಮಾತಿನ ಹಿಂದಿನ ಆಶಯವೇನು ?

2) ರಾಮನು ಸಂತೆಗೆ ಹೋಗಲು ನಡೆಸಿದ ತಯಾರಿಯನ್ನು ವಿವರಿಸಿ.

3) ವ್ಯಕ್ತಿ ಮತ್ತು ತತ್ತ್ವಗಳ ಅಂತರವನ್ನು ಕುರಿತ ಗಾಂಧೀಜಿಯ ನಿಲುವುಗಳೇನು ?

4) ಅಕ್ಕನ ಕನಸಿನ ಸ್ವರೂಪವನ್ನು ಚಿತ್ರಿಸಿ.

5) ಬೂದ-ತುಕ್ರಿಯರ ಬಾಳೆ ಕಂದಿನ ಪ್ರಸಂಗವನ್ನು ವಿವರಿಸಿ.

6) ಮಾರ್ಟಿನ್ ಲೂಥರ್ ಕಿಂಗ್‌ರ ಕನಸುಗಳ ಸ್ವಾರಸ್ಯವನ್ನು ಕುರಿತು ಬರೆಯಿರಿ.

III. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(4×5=20)**

1) 'ಸಂಜೆದಾರಿ' – ಕವಿತೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.

2) ಕೃಷ್ಣನ 'ಕಲಿಯುಗದ ಲಲಿತ ಮಹಾಕಾವ್ಯ'ದಲ್ಲಿ ವ್ಯಕ್ತವಾಗುವ ವಿಚಾರಗಳನ್ನು ಸ್ಪಷ್ಟಪಡಿಸಿ.

3) ಗ್ಯಾಂಗ್‌ಮನ್ ಸಿದ್ದಪ್ಪನಿಗೆ ಉರಿಯೋ ಲೈಟು ಕಂಬ ಕಂಡರೆ ರೋಷ ಹೊಮ್ಮಲು ಕಾರಣವೇನು ?

4) ಉತ್ತರನ ಪಾತ್ರವನ್ನು ಪರಿಚಯಿಸಿ.

5) ಲಕ್ಷ್ಮಣ ಕೊಂಚ ವಯಸ್ಸಾದಂತೆ ಕಾಣಬೇಕೆಂದು ಮಂದಣ್ಣ ಅಪೇಕ್ಷಿಸಿದ್ದೇಕೆ ?

6) ಅಯೋಧ್ಯಾನಗರಿಗೆ ಆಗಮಿಸಿದ ವಾನರರ ಚೇಷ್ಟೆಗಳ ಬಗೆಗೆ ಬರೆಯಿರಿ.

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ, ಅನುಭವಗಳ ಹಿನ್ನೆಲೆಯಲ್ಲಿ ಉತ್ತರಿಸಿ. **(2×10=20)**

1) ಶಿವರಾಮ–ಪಾರ್ವತಿಯ ಕೌಟುಂಬಿಕ ಹಗರಣವನ್ನು ವಿಶ್ಲೇಷಿಸಿ.

2) 'ಧನಿಯರ ಸತ್ಯನಾರಾಯಣ' ಕಥೆಯಲ್ಲಿನ ಜಮೀನ್ದಾರಿ ಪದ್ಧತಿಯ ಕರಾಳ ಸ್ವರೂಪ ಹೇಗೆ ವ್ಯಕ್ತವಾಗಿದೆ ? ವಿಶದ ಪಡಿಸಿ

3) 'ಅಮಾಸ' ಕಥೆಯ ವೈಶಿಷ್ಟ್ಯವನ್ನು ವಿವರಿಸಿ.

4) ಪಠ್ಯದಲ್ಲಿ ವ್ಯಕ್ತವಾಗುವ ಉತ್ತರನ ಪೌರುಷವನ್ನು ಪರಿಚಯಿಸಿ.

———————

# MS – 046

## Second Semester B.Com. Examination, May/June 2013
## (Repeaters) (2010-11)
### ಕನ್ನಡ ಭಾಷೆ – II
### ಸಾಹಿತ್ಯ ಸಮನ್ವಯ – 2 ಮತ್ತು ನಿಗೂಢ ಮನುಷ್ಯರು

Time : 3 Hours  Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. **(10×1=10)**

1) ಶ್ರೀ ಧರ್ಮಸೂತ್ರ ನಮಗೆ ಯಾವುದಾಗಬೇಕು ?
2) ನಾಣಿ ಮಗ ಶೀನಿಗೆ ಯಾವ ಪೊಗರು ?
3) ಡೊಂಬರಾಟ ಹೇಗೆ ನಡೆಸಬೇಕು ?
4) ದುಂಬಿಗಳ ಓಂಕಾರ ಎಲ್ಲಿ ಹೊಮ್ಮುತ್ತಿತ್ತು ?
5) 'ಮಸಾಲೆ ದೋಸೆ'ಯ ಲೇಖಕರು ಯಾರು ?
6) ಬಿ. ವೆಂಕಟಾಚಾರ್ಯರು ಬರೆದಿರುವ ಯಾವುದಾದರೊಂದು ಕಾದಂಬರಿಯನ್ನು ಹೆಸರಿಸಿ.
7) ಯಾವ ಧರ್ಮದಲ್ಲಿ ವರದಕ್ಷಿಣೆ ಎಂಬ ಪದವಿಲ್ಲ ?
8) ಅಕ್ಕ ಮಹಾದೇವಿಯ ಅಂಕಿತ ಯಾವುದು ?
9) ಉಗ್ರಗಿರಿಯ ಮೇಲಿರುವ ದೇವರ ಹೆಸರೇನು ?
10) ಜಗನಾಥ ರಂಗಪ್ಪನಿಗೆ ಏನಾಗಬೇಕು ?

II. ಯಾವುದಾದರೂ **ಐದನ್ನು** ಕುರಿತು ಉತ್ತರಿಸಿ. **(5×2=10)**

1) ಕುವೆಂಪು
2) ಪ್ರೊ॥ ಎಂ. ಗೋಪಾಲಕೃಷ್ಣ ಅಡಿಗ
3) ಕಿರಿಯ ಕಾಣಿಕೆ
4) ಚಂದ್ರದ್ರೋಣ ಪರ್ವತ
5) ಜಿಹಾದ್
6) ಕನ್ಯಾಶುಲ್ಕ
7) ಪರ್ಬು ಅಂಗಡಿ
8) ಪಟಾಸಿನ ಉಂಡೆ.

III. ಯಾವುದಾದರೂ **ಒಂದು** ಪದ್ಯವನ್ನು ವಿಶ್ಲೇಷಿಸಿ. **(1×6=6)**

ಮೂರನೆಯ ಸಂಜೆ ಹೆರಳಿನ ತುಂಬ ದಂಡೆ ಹೂ
ಹೂವಿಗೂ ಜೀವ ಬಂದಂತೆ
ಸಂಜೆಯಲಿ ರಾತ್ರಿ ಇಳಿದಂತೆ, ಬಿರುಬಾನಿಗೂ
ಹುಣ್ಣಿಮೆಯ ಹಾಲು ಹರಿದಂತೆ.

**ಅಥವಾ**

P.T.O.

ಉಷೆಯ ನುಣ್ಣದಪಿನಲಿ ಹರ್ಷಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತ್ತಿತ್ತು
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತ್ತಿತ್ತು.

IV. ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿ. **(6×4=24)**

1) ಭೂರಮಣಿ ಹೇಗೆ ಕಾಣುತ್ತಿದ್ದಳು ?
2) ಮನೆಗೆ ಬಂದ ಹೆಣ್ಣು ಅಪರಿಚಿತ ಪರಿಸರಕ್ಕೆ ಹೊಂದಿಕೊಂಡ ಬಗೆಯನ್ನು ತಿಳಿಸಿ
3) ಕಾನಕಾನಹಳ್ಳಿ ವರದಾಚಾರ್ಯರನ್ನು ಪರಿಚಯಿಸಿ.
4) ಸರಿಯಾದ ಆಹಾರದ ಬಗ್ಗೆ ವಿವೇಕಾನಂದರ ಅಭಿಪ್ರಾಯವನ್ನು ತಿಳಿಸಿ.
5) 'ವರದಕ್ಷಿಣೆ' ಎಂಬ ಪಿಡುಗು ಸಮಾಜವನ್ನು ಕಾಡುತ್ತಿರುವ ಬಗೆಯನ್ನು ತಿಳಿಸಿ.
6) ಡಬ್ಲ್ಯೂಟಿಸಿ ಕಟ್ಟಡವನ್ನು ನೆಲಸಮಗೊಳಿಸಿದ್ದನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?
7) ಗೋಪಾಲಯ್ಯನ ವೈವಾಹಿಕ ಜೀವನ ಎಂತಹುದು ?
8) ಸಂಗೀತದ ರಾಮಯ್ಯನವರ ಆತ್ಮಹತ್ಯೆಯನ್ನು ಕುರಿತು ಬರೆಯಿರಿ.

V. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. **(4×10=40)**

1) ಮಾನವ ವೈಚಾರಿಕವಾಗಿ ಬದುಕಬೇಕೆಂಬುದು ಕುವೆಂಪು ಅವರ ಕವಿತೆಯಲ್ಲಿ ಹೇಗೆ ಅಭಿವ್ಯಕ್ತವಾಗಿದೆ ?

**ಅಥವಾ**

''ಬೆಳಗು'' ಮೂಡುವ ಪರಿಯನ್ನು ಚನ್ನವೀರ ಕಣವಿಯವರು ವರ್ಣಿಸಿರುವ ರೀತಿಯನ್ನು ಕುರಿತು ಬರೆಯಿರಿ.

2) ತೀನಂಶ್ರೀಯವರು ತಮ್ಮ ಗುರುಗಳಾದ ಪ್ರೊ॥ ಎಂ. ಹಿರಿಯಣ್ಣಯ್ಯನವರನ್ನು ಪರಿಚಯಿಸಿರುವ ಬಗೆಯನ್ನು ವಿವರಿಸಿ.

**ಅಥವಾ**

ನಿಜವಾದ ವಿದ್ಯಾರ್ಥಿಗೆ ವ್ಯಾಸಂಗದ ಹಸಿವು ಒಳ್ಳೆಯದೆಂಬುದನ್ನು 'ಹಸಿವು' ಪ್ರಬಂಧದ ಮೂಲಕ ಸ್ಪಷ್ಟಪಡಿಸಿ.

3) 'ವರದಕ್ಷಿಣೆಯ ಸಮಸ್ಯೆಗೆ ಪ್ರೇಮವಿವಾಹ ಉತ್ತಮ ಪರಿಹಾರ' – ಎಂಬುದನ್ನು ಲೇಖಕಿಯು ನಿರೂಪಿಸಿರುವ ರೀತಿಯನ್ನು ವಿವರಿಸಿ.

**ಅಥವಾ**

ಬಸವಣ್ಣ ಅಕ್ಕನನ್ನು ಮೆಚ್ಚಿ ಕೊಂಡಾಡಲು ಇರುವ ಕಾರಣಗಳನ್ನು ವಿವರಿಸಿ.

4) 'ಸತ್ಯನಿರೂಪಣೆಯನ್ನು ಕುರಿತು ಜಗನ್ನಾಥನ ಅಭಿಪ್ರಾಯವನ್ನು ಚರ್ಚಿಸಿ.

**ಅಥವಾ**

ಗೋಪಾಲಯ್ಯನ ಪಾತ್ರವನ್ನು ಪರಿಚಯಿಸಿ.